# ಹೂವಿನಲ್ಲಿ ಶಿವಲಿಂಗ

ದಾವಣಗೆರೆಯ ತೋಟಗಾರಿಕೆ ಇಲಾಖೆಯ ವತಿಯಿಂದ ಈ ಬಾರಿ ಆಯೋಜಿಸಲಾಗಿದ್ದ ಫಲ–ಪುಷ್ಪ ಪ್ರದರ್ಶನದಲ್ಲಿ ಒಳಗಡಿ ಇಡುತ್ತಿದ್ದಂತೆ 13 ಅಡಿಯ ಶಿವಲಿಂಗ ವಿವಿಧ ಬಗೆಯ ಹೂವುಗಳಿಂದ ಕಂಗೊಳಿಸುತ್ತಾ ಮನಸೆಳೆಯುತ್ತಿತ್ತು. ಮುಂದೆ ಸಾಗಿದಂತೆ ಹೂವುಗಳಿಂದ ಅಲಂಕೃತಗೊಂಡ ಭಾರತದ ನೌಕಾದಳ, ಭೂಸೇನೆ, ವಾಯುಸೇನಾ ವಾಹನಗಳು, ನವಿಲುಗಳು ಹಾಗೂ ಕಲ್ಲಂಗಡಿ ಹಣ್ಣಿನಲ್ಲಿ  ಭಾರತ ದೇಶ ಹಾಗೂ ವಿವಿಧ ನಾಯಕರ ಚಿತ್ರಗಳು ಅಂದವಾಗಿ ಮೂಡಿ ಮೈದಳೆದಿದ್ದವು.

**–ಸೀತಾ ಎಸ್.ನಾರಾಯಣ, ಹರಿಹರ**





# ಮನ ಸೆಳೆದ ರಂಗೋಲಿ

ಉಡುಪಿ ಶ್ರೀಕೃಷ್ಣ ದೇಗುಲದ ರಥಬೀದಿಯಲ್ಲಿ ನಿತ್ಯ ಭಕ್ತಾದಿಗಳ ಸೇವೆ ನಡೆಯುತ್ತಲೇ ಇರುತ್ತದೆ. ಅನೇಕರು ತಮ್ಮ ಸೇವೆಯನ್ನು ಮಾಡುತ್ತಾ ಮೈಮರೆತರೆ ನೋಡುಗರ ಕಣ್ಣಿಗೆ ಅದೊಂದು ಉತ್ಸವ. ಇತ್ತೀಚೆಗೆ ಹೋದಾಗ ರಥಬೀದಿಯಲ್ಲಿ ನಿಂತಿರುವ ರಥದ ಮುಂದೆ ಕಲಾವಿದರೊಬ್ಬರು ಆಕರ್ಷಕ ರಂಗೋಲಿ ಬಿಡಿಸಿ ಎಲ್ಲರ ಗಮನ ಸೆಳೆದರು.

**–ರಾಮದಾಸ್ ಶೆಣೈ, ಕಾಸರಗೋಡು**

# ಪ್ರಾಮಾಣಿಕತೆ

ಈ ಕ್ಯಾನನ್ನು ಗಮನಿಸಿ. ಇದು ಉತ್ತರ ಕನ್ನಡ ಜಿಲ್ಲೆಯ ಕಾನನದ ಮಧ್ಯೆ ಇರುವ ಹಳ್ಳಿಗಳ ಬದುಕಿನ ಒಂದು ಚಿತ್ರ. ಈ ಕ್ಯಾನಿನಲ್ಲಿ ಬೆಳಿಗ್ಗೆ ಮತ್ತು ಸಂಜೆ ಶುದ್ಧ ಹಾಲು ತುಂಬಿರುತ್ತದೆ. ಹಾಲಿನ ಡೈರಿಯ ವಾಹನ ಬಂದು ಹಾಲು ತುಂಬಿದ ಕ್ಯಾನನ್ನು ಒಯ್ದು ಖಾಲಿ ಕ್ಯಾನನ್ನು ಅದೇ ಗೂಟಕ್ಕೆ ಸಿಕ್ಕಿಸಿ ಮುಂದೆ ಸಾಗುತ್ತದೆ. ಈ ಕ್ಯಾನುಗಳನ್ನು ಕಾಯುವವರು ಯಾರೂ ಇಲ್ಲ. ಹಳ್ಳಿಗಳಲ್ಲಿರುವ ಪ್ರಾಮಾಣಿಕತೆಗೆ ಇದೊಂದು ನಿದರ್ಶನ. ಈ ದೃಶ್ಯವನ್ನು ಯಲ್ಲಾಪುರ, ಶಿರಸಿ, ಸಿದ್ದಾಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಕಾಣಬಹುದು.

**–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**

